ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.
**KARNATAKA SECONDARY EDUCATION EXAMINATION BOARD**
6th Cross, Malleshwaram, Bengaluru – 560003.

# ಬಹು ಆಯ್ಕೆ ಪ್ರಶ್ನೆ ಆಧಾರಿತ ಮಾದರಿ ಪ್ರಶ್ನೆಪತ್ರಿಕೆ
# Multiple Choice Question Based Model Question Paper
## 2020 - 21
## ಪತ್ರಿಕೆ / PAPER - 02
## ವಿಷಯ : ತೃತೀಯ ಭಾಷೆ – ಕನ್ನಡ
## Subject : Third Language Kannada

| | | |
|---|---|---|
| ಸಂಕೇತ ಸಂಖ್ಯೆ | : 62K | Code No : 62K |
| ಸಮಯ | : 03 ಘಂಟೆ | Time : 3 Hours |
| ಒಟ್ಟು ಪ್ರಶ್ನೆಗಳ ಸಂಖ್ಯೆ | : 40 + 40 + 40 = 120 | Total No. of Questions : 40 + 40 + 40 = 120 |
| ಗರಿಷ್ಠ ಅಂಕಗಳು | : 40 + 40 + 40 = 120 | Max. Marks : 40 + 40 + 40 = 120 |

---

ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ / ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಉತ್ತರಪತ್ರಿಕೆ ಓ.ಎಂ.ಆರ್. (OMR) ನಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು / ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ಶೇಡ್ ಮಾಡಿರಿ.

**40 x 1 = 40**

**81. ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸ್‌ನ ಮನೆಗೆ ಲೇಖಕರಿದ್ದ ಸ್ಥಳದಿಂದ ಇರುವ ದೂರ**

A. ಎಂಟು ಮೈಲಿ　　B. ಐದು ಮೈಲಿ

C. ಏಳು ಮೈಲಿ　　D. ಹತ್ತು ಮೈಲಿ

**82. ಗೊರೂರು ರಾಮಸ್ವಾಮಿ ಅಯ್ಯಂಗಾರರು ಅಮೆರಿಕಾದ ಮಿನಿಪೊಲೀಸ್ ನಗರಕ್ಕೆ ಹೋಗಲು ಕಾರಣ**

A. ಸಂಬಂಧಿಕರನ್ನು ಭೇಟಿಯಾಗಲು　　B. ಕಚೇರಿ ದಾಖಲೆ ಪರೀಕ್ಷಿಸಲು

C. ಮಿತ್ರರನ್ನು ನೋಡಲು　　D. ವೈಯಕ್ತಿಕ ಕೆಲಸವಿರುವುದರಿಂದ

**83. ಮಿನಿಪೊಲೀಸ್ ನಗರದ ಲಾಕಪ್‌ನ್ನು ಸಾರಣೆ ಮಾಡಲು ಬಳಸುತ್ತಿದ್ದ ವಸ್ತು**

A. ನೀರು　　B. ಕ್ರಿಮಿನಾಶಕ

C. ಸಾಬೂನು　　D. ಬೇವಿನ ಎಲೆ

**84. ಗಾಂಧೀಜಿಯವರು ಕರ್ನಾಟಕ ಪ್ರವಾಸ ಕೈಗೊಂಡ ವರ್ಷ**

A. 1933 B. 1949

C. 1940 D. 1934

**85. ಗೌರಮ್ಮನವರು ಹದಿಹರೆಯದ ದಿನಗಳನ್ನು ಕಳೆದದ್ದು**

A. ನಂಜನಗೂಡಿನಲ್ಲಿ B. ಮಡಿಕೇರಿಯ ಸುಂದರ ವಾತಾವರಣದಲ್ಲಿ

C. ಬೆಂಗಳೂರಿನಲ್ಲಿ D. ಬಯಲು ಸೀಮೆಯ ಬಿಸಿಲ ಬೇಗೆಯಲ್ಲಿ

**86. ಕೊಡಗಿನ ಗೌರಮ್ಮನವರ ತಂದೆ**

A. ಎನ್.ಎಸ್. ರಾಮಯ್ಯ B. ಬಿ.ಟಿ. ಗೋಪಾಲಕೃಷ್ಣಯ್ಯ

C. ಮಂಜುನಾಥಯ್ಯ D. ಎಂ. ಪ್ರಭಾಕರಯ್ಯ

**87. ಗುರುಪಂಥವೆಂದರೆ**

A. ಗುರುಗಳಲ್ಲಿ ಭಕ್ತಿ ಭಾವವನ್ನು ತೋರಿ ನಡೆಯದೇ ಇರುವುದು

B. ಗುರುಗಳಲ್ಲಿ ಭಕ್ತಿ ಭಾವವನ್ನು ಹೊಂದದೇ ಮುಕ್ತಿ ಪಡೆಯುವುದು

C. ಗುರುಗಳು ಹೇಳಿದ್ದನ್ನು ಅಪಹಾಸ್ಯ ಮಾಡುವುದು.

D. ಗುರುಗಳಲ್ಲಿ ಭಕ್ತಿ ಭಾವವನ್ನು ತೋರಿ ನಡೆಯುವುದು.

**88. ಮರಣಕ್ಕೆ ಮುಂಚೆ ಶರೀಫರು ಸ್ಮರಿಸಿದ್ದು**

A. ತಂದೆ ಹಜರತ ಇಮಾಮ ಸಾಹೇಬರನ್ನು

B. ಗುರುಗೋವಿಂದರನ್ನೂ ಮತ್ತು ಹಿರಿಯರನ್ನು

C. ತಾಯಿ ಹಾಜುಮ್‌ರವರನ್ನು ಮತ್ತು ಹೆಂಡತಿಯನ್ನು

D. ಖಾದರ್‌ಷಾ ವಲಿಯವರನ್ನು

**89. ರಾಮಸಿಂಗನ ತಾಯಿಯ ಹೆಸರು**

A. ಜೀಜಾಬಾಯಿ B. ತುಳಜಾಬಾಯಿ

C. ಗಂಗೂಬಾಯಿ D. ಸಕ್ಕೂಬಾಯಿ

**90. ಡಿ. ಎಸ್. ಪಿ ಯವರು ಕುಲಕರ್ಣಿಯವರನ್ನು ಕರ್ತವ್ಯದ ಮೇಲೆ ಹೋಗಲು ಆದೇಶಿಸಲು ಕಾರಣ**

A. ಮೋಹನಪುರದಲ್ಲಿ ಚಲೇಜಾವ್ ಚಳುವಳಿಯ ಕಾವು ಉಕ್ಕೇರಿ ಅಲ್ಲಿನ ಪರಿಸ್ಥಿತಿ ನಿಯಂತ್ರಿಸಲು

B. ಮೋಹನಪುರದಲ್ಲಿ ಚಲೇಜಾವ್ ಚಳುವಳಿಯಲ್ಲಿ ಪಾಲ್ಗೊಂಡ ಜನರಿಗೆ ಬುದ್ಧಿ ಹೇಳಲು.

C. ಮೋಹನಪುರದಲ್ಲಿರುವ ಬ್ರಿಟಿಷ್‌ರನ್ನು ತೊಲಗಿಸಲು

D. ಮೋಹನಪುರದ ಜನರನ್ನು ಚಲೇಜಾವ್ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಲು.

**91. ಪ್ರೊ॥ ಎಸ್. ಆರ್. ರೋಹಿಡೇಕರ್ ಅವರ ಕಾವ್ಯನಾಮ**

A. ಸಿ.ಪಿ.ಕೆ.

B. ಶಾಮ್ ರೋಹಿಡೆ

C. ಬೀಚಿ

D. ಪು.ತಿ.ನ.

**92. ದೇಸಾಯಿ ಈಶ ಪ್ರಭು ಕಿಡಿಕಿಡಿಯಾಗಲು ಕಾರಣ**

A. ಶಿವಾಜಿಯ ಸೈನಿಕರ ಪರಾಕ್ರಮವನ್ನು ಕಂಡು

B. ಶಿವಾಜಿಯ ಸೈನಿಕರು ದಂಡೆತ್ತಿ ಬರುತ್ತಾರೆಂಬ ಸುದ್ದಿಯನ್ನು ಕೇಳಿ

C. ಶಿವಾಜಿಯ ಸೈನಿಕರು ಸುತ್ತಮುತ್ತಲಿನ ಹಳ್ಳಿಗರ ಹಸು, ಎಮ್ಮೆ ಅಪಹರಿಸಿ ಕಿರುಕುಳ ಕೊಡುವುದನ್ನು ಕೇಳಿ.

D. ಶಿವಾಜಿಯ ಸೈನಿಕರು ಸುತ್ತಮುತ್ತಲಿನ ಊರಿನ ಜನರನ್ನು ಅಪಹರಿಸಿದ್ದಾರೆಂಬ ಸುದ್ದಿಯನ್ನು ತಿಳಿದು.

**93. ಛತ್ರಪತಿ ಶಿವಾಜಿಯನ್ನು ಸೋಲಿಸಿದ ಬೆಳವಡಿಯ ರಾಣಿ**

A. ಕೆಳದಿ ಚೆನ್ನಮ್ಮ

B. ಮಲ್ಲಮ್ಮಾಜಿ

C. ಕಿತ್ತೂರು ಚೆನ್ನಮ್ಮ

D. ಅಬ್ಬಕ್ಕದೇವಿ

**94. ವಿಜಯಲಕ್ಷ್ಮಿ ಬಾಳೇಕುಂದ್ರಿಯವರ 'ಜೀವನಧಾರೆ' ಕೃತಿಯಿಂದ ಆಯ್ಕೆ ಮಾಡಲಾದ ಗದ್ಯಭಾಗ**

A. ಧ್ವಜ ರಕ್ಷಣೆ

B. ಕೊಡಗಿನ ಗೌರಮ್ಮ

C. ಕರ್ನಾಟಕದ ವೀರವನಿತೆಯರು

D. ಲಾಕಪ್ಪಿನಲ್ಲಿ ಒಂದು ರಾತ್ರಿ

**95. ಕ್ರಾಂತಿಕಾರರು ಕಟ್ಟಬೇಕೆಂದಿರುವ ನಾಡು**

A. ಜಾತಿ–ಭೀತಿಯಿರುವ ನಾಡು

B. ಗೋಳಿಲ್ಲದ ಗುಂಡಿಲ್ಲದ ನಾಡು

C. ಜಾತಿ–ಭೀತಿಯಿಲ್ಲದ ನಾಡು

D. ಗೋಳು ಗುಂಡು ಇರುವ ನಾಡು

96. ಕ್ರಾಂತಿಕಾರಿಗಳ ಕಾಲುಗಳು ರಕ್ತವಾಗಲು ಕಾರಣ

A. ಕ್ರಾಂತಿ ಕೆಂಡದ ಕುಂಡವನ್ನು ಹೊತ್ತು ಮುಳ್ಳು ತುಳಿಯುವುದರಿಂದ

B. ಕ್ರಾಂತಿಕಾರಿಗಳು ಬಂದೂಕಿನಿಂದ ಹೊಡೆದಿರುವುದರಿಂದ

C. ಕ್ರಾಂತಿಕೆಂಡದ ಕುಂಡ ಹೊತ್ತು ಮುಳ್ಳನ್ನು ತುಳಿಯದೇ ಇರುವುದರಿಂದ

D. ಕ್ರಾಂತಿಕಾರಿಗಳ ಕಾಲುಗಳಿಗೆ ಮೊದಲೇ ಏಟು ಬಿದ್ದಿರುವುದರಿಂದ

97. ಕರ್ನಾಟಕ ವಂಗ ಆಂಧ್ರ

A. ಬೆಳಕ ಸತ್ವ ಒಂದೆ.

B. ತಾಯ ಬಸಿರು ಒಂದೆ.

C. ಹರಿದ ನೆತ್ತರೊಂದೆ.

D. ಭಾರತೀಯರೊಂದೆ.

98. ನಿತ್ಯೋತ್ಸವ ಕವಿ ಎಂದೇ ಪ್ರಸಿದ್ಧರಾಗಿರುವ ಕವಿ

A. ಸತೀಶ ಕುಲಕರ್ಣಿ

B. ಕೆ.ಎಸ್. ನಿಸಾರ್ ಅಹಮದ್

C. ಕುವೆಂಪು

D. ಡಿ.ವಿ.ಜಿ.

99. ಶಿಲುಬೆ ಈ ಧರ್ಮದ ಸಂಕೇತವಾಗಿದೆ.

A. ಹಿಂದೂ

B. ಮುಸಲ್ಮಾನ

C. ಕ್ರೈಸ್ತ

D. ಬೌದ್ಧ

100. ಬಸವಣ್ಣನವರ ಅನಿಸಿಕೆಯಂತೆ ಆತ್ಮಶುದ್ಧಿಗೆ ಬೇಕಾಗಿರುವುದು

A. ಸುಳ್ಳು ಹೇಳುವುದು

B. ಕಳ್ಳತನ ಮಾಡುವುದು

C. ಇತರರನ್ನು ನಿಂದಿಸುವುದು

D. ಶುದ್ಧ ನಡವಳಿಕೆ ಹೊಂದಿರುವುದು

101. ಬಸವಣ್ಣನವರು ಹೇಳಿರುವಂತೆ ಅನಾಚಾರವೆಂದರೆ

A. ಸತ್ಯ

B. ಸುಳ್ಳು

C. ನರಕ

D. ಸಿಟ್ಟು

102. ಪುರಂದರದಾಸರ ಗುರುಗಳು

A. ಕನಕದಾಸರು

B. ಜಗನ್ನಾಥದಾಸರು

C. ವ್ಯಾಸರಾಯರು

D. ತ್ಯಾಗರಾಜರು

**103. ಡಾಂಭಿಕ ಭಕ್ತನು ಬದಿಯಲ್ಲಿದ್ದವರಿಗೆ ಆಶ್ಚರ್ಯವನ್ನು ಉಂಟುಮಾಡಲು ಮನದೊಳಗೆ ಈ ಗುಣಗಳನ್ನು ತುಂಬಿಟ್ಟು ಕೊಂಡಿದ್ದನು.**

A. ಮದ, ಮತ್ಸರ, ಕ್ರೋಧ

B. ಸತ್ಯ – ಅಹಿಂಸೆ

C. ತ್ಯಾಗ – ಬಲಿದಾನ

D. ಭಕ್ತಿ – ವೈರಾಗ್ಯ

**104. ಜನಪದ ಗೀತೆಯಲ್ಲಿ ವ್ಯಕ್ತವಾಗಿರುವ ಸದಾಶಯ**

A. ಜನಸಾಮಾನ್ಯರ ಜೀವನದಲ್ಲಿರುವ ಸೂಕ್ಷ್ಮ ಸಮಸ್ಯೆಗಳ ಎಳೆಗಳನ್ನು ತಿಳಿಸಿರುವುದು.

B. ಸಮೃದ್ಧವಾಗಿ ಮಳೆ ಬೆಳೆಯಾಗಿ ಎಲ್ಲರೂ ಸುಖವಾಗಿರಲಿ ಎನ್ನುವುದು.

C. ಸಮಾಜದ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿರುವುದು.

D. ನಾವೆಲ್ಲರೂ ಸಹೋದರ ಭಾವನೆಯಿಂದ ಬಾಳಬೇಕೆಂಬುದನ್ನು ಹೇಳಿರುವುದು.

**105. ಮಳೆರಾಯನಲ್ಲಿ ರೈತನು ಮಳೆ ಸುರಿಸು ಎಂದು ಹೇಳಲು ಕಾರಣ**

A. ಮಕ್ಕಳಿಗೆ ಆಟವಾಡಲು ನೀರಿಲ್ಲವೆಂದು

B. ಕಾರ್ಖಾನೆಗಳಿಗೆ ನೀರಿನ ಪೂರೈಕೆ ಕಡಿಮೆಯಾಗಿರುವುದರಿಂದ

C. ಭೂಮಿ ಬಾಡಿಹೋಗಿ, ಭೂಮಿಯ ಮೇಲಿರುವ ದನಕರುಗಳೆಲ್ಲ ಸೊರಗಿರುವುದರಿಂದ

D. ಸಮುದ್ರದ ನೀರೆಲ್ಲವೂ ಆವಿಯಾಗಿ ಹೋಗಿ ನೀರಿನ ಮಟ್ಟ ಕಡಿಮೆಯಾಗಿರುವುದರಿಂದ

**106. ಕನ್ನಡ ನಾಡಿನ ಅಜ್ಞಾತ ಕವಿಗಳು ರಚಿಸಿದ ಪದ್ಯಗಳನ್ನು ಈ ರೀತಿ ಕರೆಯುತ್ತಾರೆ.**

A. ಭಾವ ಗೀತೆಗಳು

B. ಪರಿಸರ ಗೀತೆಗಳು

C. ಜನಪದ ಗೀತೆಗಳು

D. ಚಿತ್ರಗೀತೆಗಳು

**107. ಸತೀಶ ಕುಲಕರ್ಣಿಯವರು ಕಟ್ಟ ಬಯಸಿರುವ ಮನುಕುಲ**

A. ಗೋಳು ಗುಂಡು ಇಲ್ಲದ ಮನುಕುಲ

B. ಜಾತಿ ಭೀತಿ ಇಲ್ಲದ ಮನುಕುಲ

C. ಕುಲವೆನ್ನುವ ಮನುಕುಲ

D. ಕುಲವೆನ್ನದ ಮನುಕುಲ

**108. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ಹೋಲಿಸಿರುವುದು**

A. ಭಿಕ್ಷುಕನಿಗೆ

B. ವೈರಾಗ್ಯಶಾಲಿಗೆ

C. ಚಿತ್ರನಟನಿಗೆ

D. ನಾಟಕ ಸ್ತ್ರೀಗೆ

**109. ಮಹಾಶಿಲ್ಪಿ ಮೌನಿಯಾಗಲು ಕಾರಣ**

A. ಚಿಕ್ಕ ಹುಡುಗ ಅರಸನಿಂದ ಬಿರುದಾವಳಿಯನ್ನು ಸ್ವೀಕರಿಸಿರಬಹುದೆಂದು.

B. ಬುತ್ತಿಯಲ್ಲಿ ವಿಷ ಬೆರೆಸಿದ್ದನ್ನು ತಿಂದಿರಬಹುದೆಂದು

C. ಕೋನಾರ್ಕ ದೇವಾಲಯಕ್ಕೆ ಕಲಶ ಕೂಡಿಸಿದನೆಂದು

D. ಧರ್ಮಪದನು ನದಿಯಲ್ಲಿ ಮುಳುಗಿ ಸತ್ತಿರಬೇಕು ಎಂದು ವಿಶುವಿನ ಪರಮಾಪ್ತ ಸ್ನೇಹಿತನು ಹೇಳಿರುವುದರಿಂದ

**110. ಶಿಲ್ಪಿ ಧರ್ಮಪದನ ತಂದೆಯ ಹೆಸರು**

A. ಮುಕುಂದ

B. ಮುರಾರಿ

C. ವಿಶು

D. ವಿಘ್ನೇಶ

**111. ಮನ್ವಂತರ ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

A. ಯಣ್

B. ಗುಣ

C. ಸವರ್ಣದೀರ್ಘ

D. ವೃದ್ಧಿ

**112. ಕೆಳಗಿನ ಪದಗಳಲ್ಲಿ ಉತ್ತಮ ಪುರುಷ ಸರ್ವನಾಮ**

A. ಅವನು

B. ನೀನು

C. ತಾನು

D. ನಾನು

**113. ಈ ಧ್ವಜದ ಶಕ್ತಿಯ ಮುಂದೆ ನೀವು ನಿಲ್ಲಬಲ್ಲಿರಾ? ಈ ವಾಕ್ಯದ ಕೊನೆಯಲ್ಲಿ ಬಳಸಿರುವ ಲೇಖನ ಚಿಹ್ನೆ**

A. ಭಾವಸೂಚಕ

B. ಪ್ರಶ್ನಾರ್ಥಕ

C. ವಿವರಣಾತ್ಮಕ

D. ಉದ್ಧರಣ

**114. ಕೆಳಗಿನ ಪದಗಳಲ್ಲಿ ತತ್ಸಮ ಪದ**

A. ಸಗ್ಗ

B. ಸಿರಿ

C. ಕಾವ್ಯ

D. ಕಬ್ಬಿಗ

**115. ಮಗುವಿನ ಮುಖ ಚಂದ್ರನ ಮುಖದಂತೆ ಇದೆ. ಈ ವಾಕ್ಯದಲ್ಲಿರುವ ಉಪಮೇಯ**

A. ಚಂದ್ರನ ಮುಖ

B. ಮಗುವಿನ ಮುಖ

C. ಅಂತೆ

D. ಇದೆ

**116.** **ಶರೀಫರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ಈ ವಾಕ್ಯದಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ**

A. ಶರೀಫರು
B. ದುಃಖವನ್ನು
C. ಸಹವಾಸದಿಂದ
D. ಸತ್ಪುರುಷರ

**117.** **ಕಸಕಡ್ಡಿ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

A. ಕ್ರಿಯಾ
B. ದ್ವಂದ್ವ
C. ಬಹುವ್ರೀಹಿ
D. ದ್ವಿಗು

**118.** **ಕೆಳದಿಯ ಚೆನ್ನಮ್ಮ ಮೊಗಲರನ್ನು ಸೋಲಿಸಿದಳು. ಈ ವಾಕ್ಯವು**

A. ಸಾಮಾನ್ಯ ವಾಕ್ಯ
B. ಮಿಶ್ರವಾಕ್ಯ
C. ಸಂಯೋಜಿತ ವಾಕ್ಯ
D. ಸಮ್ಮಿಶ್ರ ವಾಕ್ಯ

**119.** **ರೀತಿನೀತಿ ಪದವು**

A. ಅನುಕರಣಾವ್ಯಯ
B. ದ್ವಿರುಕ್ತಿ
C. ಜೋಡುನುಡಿ
D. ನುಡಿಗಟ್ಟು

**120.** **ಕಿರಿಯರಿಗೆ ಪತ್ರ ಬರೆಯುವಾಗ ಮುಕ್ತಾಯದ ಗೌರವ ಸಂಬೋಧನೆ ಹೀಗಿರಬೇಕು.**

A. ವಂದನೆಗಳು
B. ಆಶೀರ್ವಾದಗಳು
C. ಶುಭಾಶಯಗಳು
D. ನಮಸ್ಕಾರಗಳು

ಕಚ್ಚಾ ಕಾರ್ಯಕ್ಕಾಗಿ / For Rough Work